ದಿಃ 11.11.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಶ್ರೀ ಎಸ್.ಕೆ. ವಕೀಲರಿಂದ ,**

13. ನಾನು ನನ್ನ ತಾತ ಪಡೆದಿದ್ದ ಸಾಲದ ಹಣವನ್ನು ತೀರುವಳಿ ಮಾಡಿರುತ್ತೇನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ ಪಿ.ಕೆ.ಪಿ.ಎಸ್.ಎಸ್. ಬ್ಯಾಂಕ್ ನ ಒಂದು ದೃಢಿಕರಣ ಪತ್ರವನ್ನು ತೋರಿಸಿ ಸದರಿ ಸಾಲ ಈಗಲೂ ಬಾಕಿ ಇರುತ್ತದೆ ಎಂದು ಸೂಚಿಸಲಾಗಿ ಸಾಕ್ಷಿ ಸದರಿ ದಾಖಲೆಯನ್ನು ನೋಡಿ ಸದರಿ ದಾಖಲೆಯನ್ನು ಈ ಪ್ರಕರಣಕ್ಕೆ ಸೃಷ್ಟಿಸಲಾಗಿದೆ ಎಂದು ನುಡಿದಿದ್ದು, ನ್ಯಾಯಾಲಯದ ಅನುಕೂಲಕ್ಕಾಗಿ ಸದರಿ ದಾಖಲೆಯನ್ನು ನಿ.ಸಿ. 1 ಎಂದು ಗುರುತಿಸಲಾಯಿತು. ಸಾಲ ತೀರುವಳಿ ಮಾಡಿದ ಬಗ್ಗೆ ನನ್ನ ಬಳಿ ತೀರುವಳಿ ಪ್ರಮಾಣ ಪತ್ರ ಇರುತ್ತದೆ. ಅದನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ.

14. ನನ್ನ ತಾತ ಅನಾರೋಗ್ಯದಿಂದ ಇದ್ದರು ಎಂದು ತೋರಿಸಲು ನಾನು ನ್ಯಾಯಾಲಯಕ್ಕೆ ದಾಖಲೆ ಹಾಜರು ಪಡಿಸಿರುತ್ತೇನೆ. ನಾನು ಯಾವುದೇ ವೈದ್ಯಕೀಯ ದಾಖಲೆಗಳನ್ನು ಹಾಜರು ಪಡಿಸದೇ ಇದ್ದರು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಾತನಿಗೆ ಹರ್ನಿಯಾ ಗೆಡ್ಡೆ ಉಂಟಾಗಿ ಸಮಸ್ಯೆ ಆಗಿತ್ತು. ಆ ಸಂಬಂಧ 5 – 6 ವರ್ಷಗಳ ಹಿಂದೆ ಅವರಿಗೆ ಆಪರೇಶನ್ ಆಗಿತ್ತು. ಆ ಸಂಬಂಧ ನನ್ನ ಬಳಿ ದಾಖಲೆ ಇರುತ್ತದೆ. ಅವುಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ. ನನ್ನ ತಾತ ಗ್ರಾಮದ ಮುಖ್ಯಸ್ಥರಾಗಿ ಗ್ರಾಮ ದೇವತೆಯ ಜಾತ್ರೆಯಲ್ಲಿ ಮುಂದಾಳತ್ವ ವಹಿಸುತ್ತಿದ್ದರು ಎಂದರೆ ಸರಿಯಲ್ಲ. ನನ್ನ ತಾತನ ಮರಣದ ನಂತರ ಗ್ರಾಮ ದೇವತೆಯ ಜಾತ್ರೆಯನ್ನು ಗ್ರಾಮದ ಕಮಿಟಿ ರಚಿಸಿ ಮಾಡಲಾಗುತ್ತಿರುತ್ತದೆ. ಗ್ರಾಮದ ಸಂಪ್ರದಾಯದಂತೆ ಸದರಿ ಜಾತ್ರೆಯಲ್ಲಿ ಗ್ರಾಮ ದೇವತೆಗೆ ತಾಳಿಯನ್ನು

2023 ರವರೆಗೆ ನನ್ನ ತಾತ ಕಟ್ಟುತ್ತಿದ್ದರು ಎಂದರೆ ಸಾಕ್ಷಿ ನನ್ನ ತಂದೆ, ನಾನು ಹಾಗೂ ನನ್ನ ತಮ್ಮ ಸಹ ಕಟ್ಟಿರುತ್ತೇವೆ ಎಂದು ನುಡಿಯುತ್ತಾರೆ. 2024 ರಿಂದ ಸದರಿ ಸಂಪ್ರದಾಯವನ್ನು ನನ್ನ ತಮ್ಮ ಕಾಂತೇಶ್ ಮಾಡುತ್ತಿರುತ್ತಾರೆ ಎಂದರೆ ಸಾಕ್ಷಿ ಆ ಮೊದಲು ಸಹ ಆತ ಸದರಿ ಸಂಪ್ರದಾಯ ಮುಂದುವರೆಸಿದ್ದರು ಎಂದು ನುಡಿಯುತ್ತಾರೆ. ಆ ಸಂಬಂಧ ಭಾವಚಿತ್ರಗಳು ಇರುತ್ತದೆ.

15. 2 ನೇ ವಾದಿಯ ಮದುವೆಯಾಗಿ ಸುಮಾರು 10 - 12 ವರ್ಷಗಳಾಗಿರುತ್ತದೆ. ಆತ ಭದ್ರಾವತಿ ಉಪನೊಂದಣಾಧಿಕಾರಿ ಕಛೇರಿಯಲ್ಲಿ ನೊಂದಾವಣಿ ಮದುವೆ ಆಗಿರುತ್ತಾರೆ. ಆತನ ಮದುವೆಗೆ ಕುಟುಂಬಸ್ಥರ ಒಪ್ಪಿಗೆ ಇರಲಿಲ್ಲ ಎಂದರೆ ಸರಿಯಲ್ಲ. ಆಗಿನಿಂದ ನಮ್ಮ ಕುಟುಂಬದಲ್ಲಿ ವೈಮನಸ್ಸು ಇರುತ್ತದೆ ಎಂದರೆ ಸರಿಯಲ್ಲ. ಆತ ತನ್ನ ಹೆಂಡತಿ ಮಕ್ಕಳೊಂದಿಗೆ ಎಂದೂ ನಮ್ಮ ಮನೆಯಲ್ಲಿ ವಾಸ ಇರಲಿಲ್ಲ ಎಂದರೆ ಸರಿಯಲ್ಲ. ಸದರಿ ಆತನ ಹೆಂಡತಿ ಮಕ್ಕಳ ಸರ್ಕಾರಿ ದಾಖಲೆಗಳಲ್ಲಿ ನಾಗತಿ ಬೆಳಗಲು ಗ್ರಾಮದ ನಮ್ಮ ಮನೆಯ ವಿಳಾಸ ದಾಖಲು ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಹಾಗೂ 2 ನೇ ವಾದಿ ನನ್ನ ತಾತ ಹಾಗೂ ತಾಯಿಯನ್ನು ಸಂಪೂರ್ಣ ನಿರ್ಲಕ್ಷಿಸಿ ಅವರ ಮೇಲೆ ಹಲ್ಲೆ ಸಹ ನಡೆಸಿದ್ದೆನು ಎಂದರೆ ಸರಿಯಲ್ಲ. ಆ ಸಂಬಂಧ ನನ್ನ ತಾಯಿ ಸಹ ನಮ್ಮ ವಿರುದ್ಧ ಸಕ್ಷಮ ಪ್ರಾಧಿಕಾರಕ್ಕೆ ದೂರು ಸಲ್ಲಿಸಿದ್ದರು ಎಂದರೆ ಸರಿಯಲ್ಲ. ಸದರಿ ಪ್ರಕರಣಗಳಲ್ಲಿ ನಾನು ವಕೀಲರ ಮೂಲಕ ಹಾಜರಾಗಿದ್ದೆನು ಎಂದರೆ ಸರಿ. ದಾವಾ ಸ್ವತ್ತುಗಳ ನನ್ನ ತಾಯಿಯ ಸ್ವಾಧೀನಕ್ಕೆ ನಾವುಗಳು ಅಡ್ಡಪಡಿಸಿದ್ದು ಆ ಕಾರಣ ನನ್ನ ತಾಯಿ ನಮ್ಮ ವಿರುದ್ಧ ಉಪವಿಭಾಗಾಧಿಕಾರಿ ಅವರಲ್ಲಿ ದೂರು ನೀಡಿದ್ದರು ಎಂದರೆ ಸರಿಯಲ್ಲ. ಅದರಂತೆ ಉಪವಿಭಾಗಾಧಿಕಾರಿ ರವರು ನನ್ನ ತಾಯಿಯ ಸ್ವಾಧೀನಕ್ಕೆ ರಕ್ಷಣೆ ನೀಡುವಂತೆ ತಹಶೀಲ್ದಾರ್ ರವರಿಗೆ ಆದೇಶ ಮಾಡಿದ್ದರು ಎಂದರೆ ಸರಿ. ಸಾಕ್ಷಿ ಮುಂದುವರೆದು ದಾವಾ ಸ್ವತ್ತುಗಳ ಸಂಬಂಧ ಭದ್ರಾವತಿ ಸಿವಿಲ್ ನ್ಯಾಯಾಲಯದಲ್ಲಿ ನಮ್ಮ ಪರ ಡಿಕ್ರಿ ಆಗಿರುತ್ತದೆ ಎಂದು ನುಡಿಯುತ್ತಾರೆ. ಸದರಿ ಉಪವಿಭಾಗಾಧಿಕಾರಿ ರವರ ವಿರುದ್ಧ ಆದೇಶದ ವಿರುದ್ಧ ನಾವು ಜಿಲ್ಲಾಧಿಕಾರಿ

ರವರಲ್ಲಿ ಅಪೀಲು ಸಲ್ಲಿಸಿದ್ದೆವು ಎಂದರೆ ಸರಿಯಲ್ಲ. ಸದರಿ ಅಪೀಲು ವಜಾ ಆಗಿರುತ್ತದೆ ಎಂದರೆ ಸರಿಯಲ್ಲ. ನಮ್ಮ ಪರ ಯಾವುದೇ ಸಿವಿಲ್ ನ್ಯಾಯಾಲಯದ ಡಿಕ್ರಿ ಇರುವುದಿಲ್ಲ ಎಂದರೆ ಸರಿಯಲ್ಲ. ಮಾನ್ಯ ಉಪವಿಭಾಗಾಧಿಕಾರಿ ರವರ ಆದೇಶದ ಅನ್ವಯ ತಹಶೀಲ್ದಾರ್ ರವರು ಸ್ಥಳ ಪರಿಶೀಲನೆ ನಡೆಸಿ ದಾವಾ ಸ್ವತ್ತಿನಲ್ಲಿ ಯಾರು ಸ್ವಾಧೀನದಲ್ಲಿ ಇರುತ್ತಾರೆ ಎಂದು ವರದಿ ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ನಾವು ಎಂದೂ ದಾವಾ ಸ್ವತ್ತಿನ ಸ್ವಾಧೀನದಲ್ಲಿ ಇಲ್ಲ ಎಂದರೆ ಸರಿಯಲ್ಲ. ದಿಃ 20-04-2023 ರ ದಾನ ಪತ್ರದ ಅಡಿಯಲ್ಲಿ ಪ್ರತಿವಾದಿಯರು ದಾವಾ ಸ್ವತ್ತುಗಳ ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ. ನನ್ನ ತಾಯಿಯ ಯೋಗಕ್ಷೇಮವನ್ನು ಹಾಲಿ 2 ನೇ ಪ್ರತಿವಾದಿಯೇ ನೋಡಿಕೊಳ್ಳುತ್ತಿರುತ್ತಾರೆ ಎಂದರೆ ಸಾಕ್ಷಿ ನಮ್ಮ ತಾಯಿ ನಮಗೆ ತಿಳಿಸದೇ ಮನೆ ಬಿಟ್ಟು ಹೋಗಿರುತ್ತಾರೆ ಎಂದು ನುಡಿಯುತ್ತಾರೆ. ನಮ್ಮ ತಾಯಿಯ ಮೇಲೆ ಹಲ್ಲೆ ಮಾಡಿ ಆಕೆಗೆ ಕಿರುಕುಳ ನೀಡಿ ನಾವು ಆಕೆಯನ್ನು ಮನೆಯಿಂದ ಹೊರ ಹಾಕಿರುತ್ತೇವೆ ಎಂದರೆ ಸರಿಯಲ್ಲ.

16. ನನ್ನ ತಾಯಿ ತಮ್ಮ ಪಾಲಿನ ಸ್ವತ್ತನ್ನು 2 ನೇ ಪ್ರತಿವಾದಿಗೆ ನೀಡಲು ಇಚ್ಛೆ ಪಟ್ಟಿರುತ್ತಾರೆ ಎಂದು ನಾನು ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಬರೆಸಿರುತ್ತೇನೆ ಎಂದರೆ ಸರಿ. 1 ನೇ ಪ್ರತಿವಾದಿ ತನ್ನ ಪಾಲಿನ ಸ್ವತ್ತಿನ ಸಂಬಂಧ 2 ನೇ ಪ್ರತಿವಾದಿಯ ಹೆಸರಿಗೆ ದಾನ ಪತ್ರ ಬರೆದಿರುತ್ತಾರೆ ಎಂದರೆ ಸರಿಯಲ್ಲ. ಸದರಿ ದಾನ ಪತ್ರದ ಸಂಗತಿ ತಿಳಿದ ನಂತರ ಸುಳ್ಳು ಸಂಗತಿಗಳನ್ನು ತಿಳಿಸಿ ನಾವು ಈ ದಾವೆ ಹೂಡಿರುತ್ತೇವೆ ಎಂದರೆ ಸರಿಯಲ್ಲ.

17. ಸರ್ವೆ ನಂಬರ್ 14 ರಲ್ಲಿ ನನ್ನ ತಾತನ ಹೆಸರಿಗೆ 2 ಎಕರೆ 20 ಗುಂಟೆ ಜಮೀನು ಇರುತ್ತದೆ ಎಂದರೆ ಸರಿ. ನಮ್ಮ ಕುಟುಂಬದ ಮನೆ ಸಹ ನನ್ನ ತಾತನ ಹೆಸರಿಗೆ ಇರುತ್ತದೆ ಎಂದರೆ ಸರಿ. ಸದರಿ ಸರ್ವೆ ನಂಬರ್ 14 ರ ಸ್ವತ್ತಿನಲ್ಲಿ ಹಾಲಿ ನಾನು ಮಾತ್ರ ಸಾಗುವಳಿ ಮಾಡುತ್ತಿರುತ್ತೇನೆ. ಸದರಿ ಸ್ವತ್ತು ನನಗೆ ಸೇರಬೇಕೆಂದು ನನ್ನ ತಾತ ಯಾವುದೇ ದಾಖಲೆ ಬರೆದುಕೊಟ್ಟಿಲ್ಲ ಎಂದರೆ ಸರಿ. ಸದರಿ

ಸ್ವತ್ತುಗಳನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿ. ಸದರಿ ಸ್ವತ್ತುಗಳಲ್ಲಿ ಪ್ರತಿವಾದಿಯರಿಗೆ ಪಾಲು ನೀಡಬೇಕಾಗುತ್ತದೆ ಎಂಬ ಕಾರಣಕ್ಕೆ ಸದರಿ ಸ್ವತ್ತುಗಳನ್ನು ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿಯಲ್ಲ. ಸದರಿ ಸ್ವತ್ತುಗಳ ಖಾತೆ ಹಾಲಿ ನನ್ನ ತಾತನ ಹೆಸರಿಗೆ ಇರುತ್ತವೆ. ದಾವಾ ಸ್ವತ್ತುಗಳ ಖಾತೆ ಪ್ರತಿವಾದಿಯರ ಹೆಸರಿಗೆ ಜಂಟಿಯಾಗಿ ಇರುತ್ತದೆ ಎಂದರೆ ಸರಿ. ಅವರುಗಳ ಹೆಸರಿಗೆ ಖಾತೆ ಬದಲಾವಣೆ ಆಗಿರುವುದನ್ನು ನಾವು ಎಲ್ಲಿಯೂ ಪ್ರಶ್ನಿಸಿಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ತನ್ನ ಪಾಲಿನ ಸ್ವತ್ತನ್ನು 2 ನೇ ಪ್ರತಿವಾದಿಯ ಹೆಸರಿಗೆ ಹಕ್ಕು ಖುಲಾಸೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಪತ್ರದ ಆಧಾರದಲ್ಲಿ 2 ನೇ ಪ್ರತಿವಾದಿಯ ಹೆಸರಿಗೆ ಸ್ವತ್ತುಗಳ ಖಾತೆ ಬದಲಾವಣೆ ಮಾಡದಂತೆ ಕಂದಾಯ ಅಧಿಕಾರಿಗಳಲ್ಲಿ ನಾನು ತಕರಾರು ಸಲ್ಲಿಸಿರುತ್ತೇನೆ ಎಂದರೆ ಸರಿ. ಹಾಲಿ ದಾವಾ ಸ್ವತ್ತುಗಳ ಖಾತೆ 2 ನೇ ಪ್ರತಿವಾದಿಯ ಹೆಸರಿಗೆ ಇರುತ್ತವೆ ಎಂದರೆ ಸರಿ. ನನ್ನ ತಾತ ಬರೆದುಕೊಟ್ಟ ದಾನ ಪತ್ರ ಹಾಗೂ 1 ನೇ ಪ್ರತಿವಾದಿ ಬರೆದುಕೊಟ್ಟಿರುವ ಹಕ್ಕು ಖುಲಾಸೆ ಪತ್ರದ ಆಧಾರದಲ್ಲಿ 2 ನೇ ಪ್ರತಿವಾದಿ ದಾವಾ ಸ್ವತ್ತಿನ ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ. ಕುಟುಂಬದ ವಿಭಾಗದಲ್ಲಿ ನನ್ನ ಪಾಲಿಗೆ ಬಂದ ಸ್ವತ್ತುಗಳನ್ನು ನಾನು ಈಗಾಗಲೇ ಮಾರಾಟ ಮಾಡಿರುತ್ತೇನೆ ಎಂದರೆ ಸರಿ. ನನ್ನ ತಾತ ಪ್ರತಿವಾದಿಯರಿಗೆ ನೀಡಿದ ಸ್ವತ್ತುಗಳನ್ನು ಲಪಟಾಯಿಸಲು ಸುಳ್ಳು ದಾವೆ ಹೂಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

18. ದಿಃ 20-04-2023 ರಂದು ನನ್ನ ತಾತ ಪ್ರತಿವಾದಿಯರ ಹೆಸರಿಗೆ ನೊಂದಾಯಿತ ದಾನ ಪತ್ರ ಬರೆದಿರುತ್ತಾರೆ ಎಂದರೆ ಸರಿಯಲ್ಲ. ಸದರಿ ದಾನ ಪತ್ರ ಬರೆದುಕೊಡಲು ನನ್ನ ತಾತನಿಗೆ ಆರೋಗ್ಯ ಸಮಸ್ಯೆ ಇತ್ತು ಎಂದು ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ದಾನ ಪತ್ರ ಆದ ದಿವಸವೇ ನಾನು ಹೇಳಿದಂತೆ ನನ್ನ ತಾತ ಒಂದು ಕ್ರಯ ಪತ್ರವನ್ನು ಸಹ ಬರೆದುಕೊಟ್ಟಿರುತ್ತಾರೆ ಎಂದರೆ ಸರಿ. ಸದರಿ ದಾಖಲೆಗಳು ಆಗುವ ಸಮಯ ನನ್ನ ತಾತನ ದೈಹಿಕ ಹಾಗೂ ಮಾನಸಿಕ ಆರೋಗ್ಯ ಸರಿಯಾಗಿತ್ತು ಎಂದರೆ ಸರಿಯಲ್ಲ. ಸದರಿ ದಾನ ಪತ್ರಗಳನ್ನು

ಪ್ರತಿವಾದಿಯರು ನನ್ನ ಅಜ್ಜನಿಗೆ ಮೋಸ ಮಾಡಿ ಬರೆಸಿಕೊಂಡಿರುತ್ತಾರೆ ಎಂದು ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ದಾವಾ ಸ್ವತ್ತಿನ ಸ್ವಾಧೀನದಲ್ಲಿ ಇಲ್ಲದೇ ಇದ್ದರು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳು ಇನಾಮು ಜಮೀನುಗಳಾಗಿದ್ದರು ಮಾರಾಟ ಮಾಡಲು ಬರುವುದಿಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಪಾಲಿಗೆ ಬಂದ ಇನಾಮು ಜಮೀನುಗಳನ್ನು ನಾವು ಈಗಾಗಲೇ ಮಾರಾಟ ಮಾಡಿರುತ್ತೇವೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳನ್ನು ಲಪಟಾಯಿಸಲು ಸುಳ್ಳು ದಾವೆ ಹೂಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

*(ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)*

**ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.**

***(ಟಿ.ಶ್ರೀಕಾಂತ್)***
**1 ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಭದ್ರಾವತಿ**